◆ **ನೀವು ನೃತ್ಯ ಕ್ಷೇತ್ರಕ್ಕೆ ಬರಲು ಮುಖ್ಯ ಕಾರಣ ಅಮ್ಮ ಎಂದು ಆಗಾಗ ಹೇಳುತ್ತೀರಿ. ಅಮ್ಮನ ಬಗ್ಗೆ ಹೇಳಿ. ಬಾಲ್ಯದ ನೃತ್ಯ ಶಿಕ್ಷಣ ಆರಂಭವಾದುದು ಹೇಗೆ ಎನ್ನುವುದನ್ನು ನೆನಪಿಸಿಕೊಳ್ಳುವಿರಾ?**

ಸಾಮಾನ್ಯವಾಗಿ ಎಲ್ಲ ಮಕ್ಕಳೂ ನೃತ್ಯವನ್ನು ಇಷ್ಟಪಡುತ್ತಾರೆ. ನಂಗೂ ಡಾನ್ಸ್ ಮಾಡುವುದೆಂದರೆ ಖುಷಿ. ನನ್ನ ಆಸಕ್ತಿಯನ್ನು ಗಮನಿಸಿದ ಅಮ್ಮ ಒಂದು ಡಾನ್ಸ್ ಕ್ಲಾಸ್‌ಗೆ ಸೇರಿಸಿದ್ದಳು. ಅವಳಿಗಾಗ ಶಾಸ್ತ್ರೀಯ ನೃತ್ಯದಲ್ಲಿ ವಿವಿಧ ಪ್ರಕಾರಗಳಿವೆ ಎಂಬುದು ಗೊತ್ತಿರಲಿಲ್ಲ. ಅವಳ ಪ್ರಕಾರ ನೃತ್ಯವೆಂದರೆ ಡಾನ್ಸ್ ಕ್ಲಾಸ್. ಹಾಗಾಗಿ ಮನೆಪಕ್ಕದಲ್ಲಿರುವ ಡಾನ್ಸ್ ಕ್ಲಾಸ್‌ಗೆ ಸೇರಿಸಿದ್ದಳು. ಅದು ಭರತನಾಟ್ಯ ಕ್ಲಾಸು. (ನಂತರ ಇದೇ ಭರತನಾಟ್ಯವನ್ನು ನಾನು ರಾಮ್ ಗೋಪಾಲ್ ಅವರ ಬಳಿ ಕಲಿತೆ). ಮಣಿಪುರಿ, ಬ್ಯಾಲೆಯನ್ನೂ ಸ್ವಲ್ಪ ಸ್ವಲ್ಪ ಕಲಿಯುತ್ತಿದ್ದೆ. ಹೀಗೆ ಕಥಕ್ ಕೂಡ ನನ್ನ ನೃತ್ಯಕಲಿಕೆಯ ಹಾದಿಯಲ್ಲಿ ಒದಗಿ ಬಂತು ಎನ್ನಬಹುದು. ಮುಂಬೈಯಲ್ಲಿ ಯಾರೆಲ್ಲ ಗುರುಗಳು ಕಥಕ್ ತರಗತಿಗಳನ್ನು ಮಾಡುತ್ತಿದ್ದರೋ, ಅವರ ಬಳಿಯೆಲ್ಲಾ ಹೋಗಿ ಹೋಗಿ ಕಥಕ್ ಕಲಿಯುತ್ತಿದ್ದೆ. ಹೀಗೆ ಒಮ್ಮೆ ರಾಧೆಲಾಲ್ ಮಿಶ್ರಾ ಅವರಿಂದ ಕಥಕ್ ಕಲಿಯುವಂತೆ ಸುಂದರ್ ಪ್ರಸಾದ್ ಜಿ ಅವರು ನನ್ನ ಅಮ್ಮನಿಗೆ ತಿಳಿಸಿದರು. ರಾಧೇಲಾಲ್‌ಜಿ ಅವರ ಕಲಾಸಾಮರ್ಥ್ಯದ ಬಗ್ಗೆಯೂ ಅವರು ಅಮ್ಮನಿಗೆ ಕೊಂಚ ವಿವರಿಸಿದ್ದರು. ಅಮ್ಮನಿಗೆ ಈ ಸಲಹೆ ಬಹಳ ಇಷ್ಟವಾಯಿತು. ಅವರು ರಾಧೇಲಾಲ್‌ಜಿ ಅವರನ್ನು ಭೇಟಿಯಾಗಿ ನಮ್ಮ ಮನೆಯಲ್ಲಿಯೇ ಉಳಿಯುವಂತೆ ತಿಳಿಸಿದರು. ಅಷ್ಟೇ ಅಲ್ಲ, ಗುರುಗಳು ನಮ್ಮ ಮನೆಯ ಸದಸ್ಯರೇ ಆಗಿಬಿಟ್ಟರು. ಅಂದರೆ ಮುಂಬೈಯಲ್ಲಿ ವಾಸಿಸುತ್ತಿದ್ದ ನಾವು, ಅಪ್ಪಾಜಿಯ ಉದ್ಯೋಗ ನಿಮಿತ್ತ ಅಲ್ಲಿಂದ ಕುಟುಂಬವಿಡೀ ಲಕ್ನೋಗೆ ತೆರಳಬೇಕಾದ ಪರಿಸ್ಥಿತಿ ಬಂದಾಗ, ರಾಧೇಲಾಲ್‌ಜಿ ಅವರನ್ನು ನಮ್ಮೊಡನೆಯೇ ಕರೆದುಕೊಂಡು ಹೋದೆವು. ನಾನು ಲಾಹೋರ್‌ನಲ್ಲಿ ಕ್ವೀನ್ ಮೇರೀಸ್ ಶಾಲೆಗೆ ಸೇರಿದಾಗ, ಅದೇ ಶಾಲೆಯಲ್ಲಿ ರಾಧೇಲಾಲ್‌ಜಿ ಅವರಿಗೆ ನೃತ್ಯ ಶಿಕ್ಷಕರಾಗಿ ಉದ್ಯೋಗ ಕೊಡಿಸಿದರು ಕೂಡ.

◆ **ನೃತ್ಯದ ಬಗ್ಗೆ ಅಷ್ಟೆಲ್ಲ ಆಸ್ಥೆ ವಹಿಸಿದ್ದ ನಿಮ್ಮ ಅಮ್ಮ ಕಲಾವಿದೆಯಾಗಿದ್ದರೆ?**

ಅವರು ಸಂಗೀತ ಕಲಾವಿದೆಯಾಗಿದ್ದರು. ಆಕಾಶವಾಣಿ ಕಲಾವಿದೆಯಾಗಿ, ವಿದುಷಿಯಾಗಿ ಗುರುತಿಸಿಕೊಂಡಿದ್ದರು. ಅವರಿಗೆ ನೃತ್ಯವೆಂದರೆ ಬಹಳ ಇಷ್ಟ. ಆದರೆ ಆ ಕಾಲದಲ್ಲಿ ನೃತ್ಯ ಮಾಡುವ ಮಹಿಳೆಯರ ಬಗ್ಗೆ ಸಮಾಜದಲ್ಲಿ ಒಳ್ಳೆಯ ಅಭಿಪ್ರಾಯವಿರಲಿಲ್ಲ. ಹಾಗಾಗಿ ಅವರು ಸಂಗೀತದತ್ತ ಗಮನ ಹರಿಸಿದರು. ಸಂಗೀತ ಕಲಾವಿದೆಯಾಗಿಯೂ ಅವರು ಉನ್ನತ ಸ್ತರಕ್ಕೆ ಏರಬಹುದಾಗಿತ್ತು. ಆದರೆ ಸಾಮಾಜಿಕ ಅಭಿಪ್ರಾಯಕ್ಕೆ ತಲೆಬಾಗಿ ಅವರು ಸಂಗೀತವನ್ನು ವೃತ್ತಿಪರವಾಗಿ ಸ್ವೀಕರಿಸಲಿಲ್ಲ. ಮೊದ ಮೊದಲು ಅವರು ನನಗೆ ಸಂಗೀತ ಕಲಿಸಲು ಪ್ರಯತ್ನಿಸಿದರು. ಆದರೆ ನನಗೆ ನೃತ್ಯವು ಒಲಿಯಬಹುದು ಎಂಬುದು ಅವರ ಅರಿವಿಗೆ ಬಂದಿತ್ತು. ಹಾಗೆ ನೋಡಿದರೆ ನನಗೆ ನೃತ್ಯ ಇಷ್ಟ ಎಂಬುದನ್ನು ನನಗಿಂತ ಮೊದಲು ಅಮ್ಮನೇ ಗುರುತಿಸಿದ್ದರು. ಆ ಮಟ್ಟಿಗೆ ನಾನು ಅದೃಷ್ಟವಂತೆಯೇ ಸರಿ. ಮಗಳಿಗೆ ನೃತ್ಯ ಕಲಿಸಬೇಕು ಎಂದು ಅವರ ಮನಸ್ಸಿಗೆ ಬಂದದ್ದೇ ನೃತ್ಯ ತರಗತಿಯ ಬೋರ್ಡುಗಳು ಕಂಡ ಕೂಡಲೇ ಆ ತರಗತಿಗೆ ನನ್ನನ್ನು ಕರೆದುಕೊಂಡು ಹೋಗಿಬಿಡುತ್ತಿದ್ದರು. ಅವರಿಗೆ ಶಾಸ್ತ್ರೀಯ ನೃತ್ಯದಲ್ಲಿದ್ದ ವಿವಿಧ ಪ್ರಭೇದಗಳ ಅರಿವಿರಲಿಲ್ಲ. ಒಮ್ಮೆ ಅಪ್ಪ ಆಶೀಖ್ ಹುಸೇನ್ ಎಂಬ ಅಂದಿನ ಪ್ರಸಿದ್ಧ ಸಿನಿಮಾ ಕಲಾವಿದರನ್ನು ಮನೆಗೆ ಕರೆದುಕೊಂಡು ಬಂದರು. ಅವರು ಜಾನಕಿ ಪ್ರಸಾದ್ ಘರಾನಾಕ್ಕೆ ಸೇರಿದ್ದ ಕಥಕ್ ನೃತ್ಯಪಟುವಾಗಿದ್ದರು. ಅವರು ನನಗೆ ನೃತ್ಯ ಕಲಿಸಲು ಒಪ್ಪಿಕೊಂಡಾಗ ನಾನು ಕಥಕ್ ವಿದ್ಯಾರ್ಥಿನಿಯಾದೆ. ಎಷ್ಟೋ ಬಾರಿ ನಾನು, ಕಥಕ್ ಕ್ಲಾಸ್‌ಗಳಲ್ಲಿ ಸರಿಯಾಗಿ ಅಭ್ಯಾಸ ಮಾಡದೇ ಉದಾಸೀನ ತೋರುತ್ತಿದ್ದೆ. ಸುಸೂ ಹೋಗಬೇಕು, ನೀರು ಕುಡಿಯಬೇಕು, ಕಾಲು ನೋವು, ಕೈ ಉಳುಕು ಎಂದು ಕ್ಷುಲ್ಲಕ ಕಾರಣಗಳನ್ನು ಹೇಳುತ್ತ ತರಗತಿಯಿಂದ ಹೊರಬರುವ ಉಪಾಯ ಹೂಡುತ್ತಿದ್ದೆ. ಇದನ್ನು ಗಮನಿಸಿದ ಅಮ್ಮ, ತರಗತಿಯ ಹೊರಗೆಯೇ ಕುರ್ಚಿ ಹಾಕಿಕೊಂಡು ಕೂರತೊಡಗಿದರು. ಅವರ ಕೆಂಗಣ್ಣಿಗೆ ಹೆದರಿ ನಾನು ಅಭ್ಯಾಸವನ್ನು ನಿರಂತರವಾಗಿ ಮುಂದುವರೆಸುತ್ತಿದ್ದೆ. ಕಲೆ ಮತ್ತು ಶಿಕ್ಷಣ ಎಂದಿಗೂ ವ್ಯಕ್ತಿಯನ್ನು ಏಕಾಂಗಿಯನ್ನಾಗಿ ಮಾಡುವುದಿಲ್ಲ. ಅದು ಬದುಕನ್ನು ಉನ್ನತಿಗೇರಿಸುತ್ತದೆ ಎಂದು ನನಗೆ ಅಕ್ಕರೆಯಿಂದ ಕಿವಿಮಾತು ಹೇಳುತ್ತಿದ್ದರು. ಹಾಗೆ ಈ